Doc-497
T-P-2

(1)

Reg no KRN 12 ಶ್ರೀ - For Influential Publicity - 24-11-76

ಸ್ವರ್ಣ ಮಹೋತ್ಸವ ನೇರವೇರಿಸಿದ ವಜ್ರ ಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 5 ಪೈಸೆ

ಪ್ರಧಾನಿ ಇಂದಿರಾರವರ ಅಭಿಪ್ರಾಯ

ಜವಾಹರನಗರ — ಜನರು ತಮ್ಮ ಪ್ರದೇಶದ ಹೊರಗಿನ ಉಡ ಪುಗಳನ್ನು ಉಪಯೋಗಿಸುವುದನ್ನು ತಾವು ನೋಡಲು ಇಚ್ಚಿಸುವುದಾಗಿ ಪ್ರಧಾನಿ ಇಂದಿರಾ ಗಾಂಧಿಯವರು ತಿಳಿಸಿದರು

○

ರೂ 256 ಕೋಟಿ ಯೋಜನೆ

ಬೆಂಗಳೂರು — ಕರ್ನಾಟಕದ 77-78 ರ ವಾರ್ಷಿಕ ಕರಡು ಯೋಜನೆಯಲ್ಲಿ ರೂ 256 ಕೋಟಿ ಆಗುವಂತಿದೆ.

★

ಶಿವಪ್ಪ ನಾಯಕರ ಪ್ರತಿಮೆ — ಪೌರಸಭೆಗೆ

ಶಿವಮೊಗ್ಗ — ನಗರ ಸಭೆ ವೆಚ್ಚ ಮಾಡಿರುವ ರೂ. 80 ಸಾವಿರದ ಭವ್ಯ ಆಕಾರದ ಅಶ್ವಾರೋಹಿಯಾಗಿ ನಿಂತಿರುವ ಶಿವಪ್ಪ ನಾಯಕರ ಪ್ರತಿಮೆ ನಗರ ಪೌರ ಸಭೆಯ ವಶಕ್ಕೆ ಬಂದಿತು

○

ಶನಿದೇವರ ಮೆರವಣಿಗೆ — ರಾಜಬೀದಿಯಲ್ಲಿ

ಶಿವಮೊಗ್ಗ — ಶನಿದೇವರ ಉತ್ಸವ ಮೆರವಣಿಗೆ ರಾಜಬೀದಿಯಲ್ಲಿ ಸೋಮವಾರ ನಡೆಯಿತು

●

ದೇವರ ವಿಷಯ ತಿಳಿಯುವ ವರೆಗೆ ಮೊಕದ್ದಮೆ ಮುಂದಕ್ಕೆ

ಲೀಡ್ಸ್ (ಇಂಗ್ಲೆಂಡ್) — 7 ವರ್ಷದ ಕರೆನ್ ವೆಲಿನ್ ತನ್ನ 2 ವರ್ಷದ ತಮ್ಮನನ್ನು ಒಬ್ಬನು ಹೊಡೆದು ಗಾಯಗೊಳಿಸಿದ ಮೊಕದ್ದಮೆಯಲ್ಲಿ ಸಾಕ್ಷ್ಯ ನೀಡಲು ಕರೆಯಲ್ಪಟ್ಟಳು ಇವಳಿಗೆ ದೇವರ ವಿಷಯ ಏನೂ ಗೊತ್ತಿಲ್ಲದ ಸ್ಕೂಲಿನಲ್ಲಿ ವರ್ಗಬೋಧನೆ ಹೊಂದಿಲ್ಲದ್ದನ್ನು ಕಂಡು, ನ್ಯಾಯಾಧೀಶರು, ದೇವರ ವಿಚಾರ ತಿಳಿಯುವ ವರೆಗೆ ವಿಚಾರಣೆ ಮುಂದುವರಿಸಿದರು.

★

ಹದಿನಾಲ್ಕನೆಯ ಶತಮಾನದ ಸ್ಟೂಡಿಯೋ ಪತ್ತೆ

ದುರ್ಶಬೆ — ತಾಜಿಕಸ್ತಾನದ ಪುರಾತನ ಪೆಂಜಿಕೆಂಟಿನಲ್ಲಿ ಹಲವು ಮೀಟರುಗಳ ಆಳದಲ್ಲಿ 14 ನೆಯ ಶತಮಾನದ ಸ್ಟೂಡಿಯೋವನ್ನು ರಷ್ಯ ಭೂಗರ್ಭ ಶೋಧಕರು ಪತ್ತೆ ಮಾಡಿರುವರು ಒಳಗಡೆ ಇರುವ ಕೊಠಡಿಗಳು ಹಲವು ಬಣ್ಣಗಳ ನಪ್ಪೆತ್ರಗಳಿಂದ ಅಲಂಕರಿಸಲ್ಪಟ್ಟಿರುವ ದೇವತೆಗಳ ವರ್ಣ ಚಿತ್ರಗಳು ಇವೆ. ಹಬ್ಬಗಳ, ಹೂಹಾರಗಳ ಮತ್ತು ಹಣ್ಣುಗಳ ಚಿತ್ರಗಳು ಇವೆ

○

ದಿನವಾಣಿ — ಯೋಚಿಸಲಾರದವನು ಒಬ್ಬ ಮೂಢ; ಯೋಚಿಸಲು ಧೈರ್ಯ ತೋರದವನು ಒಬ್ಬ ಗುಲಾಮ — ಜಿಂಗ್ ಜೌ

ಪುಸ್ತಕ ಮುಟ್ಟುಗೋಲು

ಬೆಂಗಳೂರು — ಜಮ್ಮು ಕಾಶ್ಮೀರ ರಾಷ್ಟ್ರೀಯ ವಿಮೋಚನಾ ರಂಗದ ಅಧಿಕೃತ ಅಂಗ ಎಂದು ಇಂಗ್ಲೆಂಡಿನಲ್ಲಿ ಪ್ರಕಟವಾಗಿರುವ ವಾಯ್ಸ್ ಆಫ್ ಕಾಶ್ಮೀರ್ ಈ ಹೊಸ ಪುಸ್ತಕವನ್ನು ರಾಜ್ಯ ಸರಕಾರ ಮುಟ್ಟುಗೋಲು ಹಾಕಿದೆ ಈ ಪುಸ್ತಕ ಅವಮಾನವನ್ನು ಭಾರತ ಆರ್ಥಿಕ ಸಚಿವಾಲಯ ಪ್ರತಿಬಂಧಿಸಿದೆ

●

ಸಿಂಗ್ ನೋಡಲು ಭಾರಿ ಜನ

ಜವಾಹರನಗರ — ಎ ಐ ಸಿ ಸಿ ಅಧಿವೇಶನ ಸ್ಥಳದ ಹತ್ತಿರದಲ್ಲಿಯ ವಸ್ತು ಪ್ರದರ್ಶನಕ್ಕೆ ಪಂಜಾಬಿನಿಂದ ಕರೆತರಲಾದ 7 ಅಡಿ 1 ಅಂಗುಲ ಎತ್ತರದ ಕರಂಸಿಂಗನನ್ನು ನೋಡಲು ತುಂಬಾ ಜನ ಬಂದರು.

○

ದೀಪೋತ್ಸವ ವ್ಯವಸ್ಥೆ

ಹೊಸನಗರ — ಶ್ರೀ ಗಣಪತಿ ದೇವಸ್ಥಾನದಲ್ಲಿ 21 ನೇ ತಾರೀಖು ದೀಪೋತ್ಸವವು ನೆರವೇರಿತು

★

ತೆರಿಗೆ ತಪ್ಪಿಸಿಕೊಂಡವರ ಪತ್ತೆ

ಬೊಂಬಾಯಿ — ಟ್ರಾನ್ಸ್‌ಪೋರ್ಟ್ ಆಪರೇಟರುಗಳ ಒಂದು ತಂಡ ರೂ 16 ಲಕ್ಷ ತೆರಿಗೆ ತಪ್ಪಿಸಿಕೊಂಡಿರುವುದು ಪತ್ತೆ ಆಗಿದೆ.

★

ಕನ್ನಡಿಗರಿಗೆ ದಾನ

ಪ್ಯೂಡಟ್ಟೂರ್ — ಜಮಲ್ ಮಡು ಗಾವಿನಲ್ಲಿ ಈಚೆಗೆ ನಡೆಸಲಾದ ಉಚಿತ ನೇತ್ರ ಶಿಬಿರದ ರೋಗಿಗಳಿಗೆ ಇಬ್ಬರು ಇನ್ನೊಂದು ಕನ್ನಡಿಗರನ್ನು ಉದಾರ ದಾನ ಮಾಡಿದರು.

★ ಜೋರ್ಡಾನಿನ ಯುವರಾಜರು ನಿನ್ನೆ ನವದೆಹಲಿಗೆ ಆಗಮಿಸಿದರು.

ನೇತ್ರ ಶಿಬಿರ

ಭಾರತ ರಾಷ್ಟ್ರಪತಿಯವರ ಗೌರವ ನೇತ್ರ ವೈದ್ಯರಾದ ನೇತಡಾನಿ ಪದ್ಮಭೂಷಣ ಡಾ|| ಎಂ ಸಿ ನೋದಿಯವರು ನಾಸಿಕ್ ಜಿಲ್ಲೆಯ ಮಲೆಗೋವನ್‌ನಲ್ಲಿ ಈ ತಿಂಗಳು 27 ನೇ ತಾರೀಖು ಉಚಿತ ನೇತ್ರ ಶಿಬಿರ ಪ್ರಾರಂಭಿಸುವರು

●

ರಾಸುಗಳ ಪ್ರದರ್ಶನ

ಮೈಸೂರು ನರಸಿಂಹರಾಜಾ ಮೊಹಲ್ಲಾ ಪಶುವೈದ್ಯ ಆಸ್ಪತ್ರೆ ಅಭಿವೃದ್ಧಿ ಸಮಿತಿ ಆಶ್ರಯದಲ್ಲಿ ಈ ತಿಂಗಳು 28 ನೇ ತಾ|| ಸಂಜೆ 4 ಗಂಟೆಗೆ ಹಾಲು ಕರೆಯುವ ಹಾಗೂ ಕರು ಮತ್ತು ಕಡಸುಗಳ ಪ್ರದರ್ಶನದಲ್ಲಿ ಒಳ್ಳುವಾನ ಪಡೆದ ಉತ್ತಮ ರಾಸುಗಳಿಗೆ ಬಹುಮಾನ ವಿತರಣಾ ಸಮಾರಂಭ ಏರ್ಪಡಿಸಿದೆ.

★

ಉಪ ರಾಷ್ಟ್ರಪತಿಯವರು

ಮೈಸೂರಿನ ಸಂಸ್ಕೃತ ಮಹಾಪಾಠಶಾಲೆ ಮತ್ತು ವಾಣಿವಿಲಾಸ ಪೌಢಶಾಲೆ ಶತಮಾನೋತ್ಸವ ಸಮಾರಂಭದಲ್ಲಿ ಭಾರತದ ಉಪ ರಾಷ್ಟ್ರಪತಿಯವರಾದ ಶ್ರೀ ಬಿ ಡಿ ಜತ್ತಿಯವರು ಭಾಗವಹಿಸುವರು ಈ ಸಮಾರಂಭ ಡಿಸೆಂಬರು 10 ರಂದು ನಡೆಯಲಿದೆ.

★

ಗಡೀಪಾರು ಆಜ್ಞೆ

ಪೋಲೀಸು ಸೂಪರಿಂಟೆಂಡೆಂಟರ ಶಿಫಾರಸು ಮೇಲೆ, ಮೈಸೂರು ಜಿಲ್ಲಾಧಿಕಾರಿಯವರು ಕೆ ಆರ್ ನಗರ ತಾಲ್ಲೂಕಿನ ಚಿಕ್ಕನಾಯ್ಕನಹಳ್ಳಿ ಗ್ರಾಮದ 12 ಜನರ ಮೇಲೆ 1 ವರ್ಷ ಅವಧಿಯ ಗಡೀಪಾರು ಆಜ್ಞೆ ಮಾಡಿದ್ದಾರೆ.

★ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಗೌಹತಿ ಹತ್ತಿರ ಕಮಲಾಮಂದಿರಕ್ಕೆ ಅನಿರೀಕ್ಷಿತ ಭೇಟಿ ನೀಡಿ ದೇವರ ದರ್ಶನ ಪಡೆದರು.

ಮೈಸೂರು ದಸರಾ ವಸ್ತು ಪ್ರದರ್ಶನ

26 ನೇ ತಾ॥ 6-45 ಶ್ರೀಕೃಷ್ಣರಾಜಯುವಕ ಸಂಘದವರಿಂದ ನಾಟಕ

ಪರೀಕ್ಷೆ ಶುಲ್ಕ ಏರಿಕೆ ಪರಿಶೀಲನೆಯಲ್ಲಿ

ಎಸ್ ಎಸ್ ಎಲ್ ಸಿ ಪರೀಕ್ಷೆ ಶುಲ್ಕವನ್ನು ರೂ 25 ರಿಂದ 30 ಕ್ಕೆ ಹೆಚ್ಚಿಸುವ ಅಂಶ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಗೊತ್ತಾಗಿದೆ.

ಜಿಮ್ಮಿ ಕಾರ್ಟರ್‌ಗೆ ಬಿಡಲಾಗುವುದು

ಪಾಕೀಸ್ತಾನಕ್ಕೆ ಬಾಂಬರುಗಳನ್ನು ಕೊಡುವ ವಿಚಾರವನ್ನು ಪೋರ್ಡರು ಜಿಮ್ಮಿ ಕಾರ್ಟರ್ ನಿರ್ಧಾರಕ್ಕೆ ಬಿಡುವರೆಂದು ಹೇಳಲಾಗಿದೆ.

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



"ಸತ್ಯವಾದಿ" ವಜ್ರಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

Contribute Liberally to the National Defence Fund

Protect the Cow

ವುಡ್‌ಲಾಂಡ್ 26 11 76 ರಿಂದ

ಅವೋಘ ಆರಂಭ

ನೂತ್ರದ ಬೊಂಬೆ

ಪಾತ್ರ – ಶ್ರೀನಾಥ್, ಉದಯಕುಮಾರ್, ನರಸಿಂಹರಾಜು, ವಿಂಜಾಳ (ದಕ್ಷಿಣ)

ಕನ್ನಡ ಕಲರ್

ದಿನ 4 ಪ್ರದರ್ಶನಗಳು

ಅಪರಾ 19 11 76ರಿಂದ

ಪ್ರೇಮಬಂಧ

ಶೋಭನಬಾಬು ವಾಣಿಶ್ರೀ ಸತ್ಯನಾರಾಯಣ ಅಭಿನಯ

ತೆಲುಗು ಪ್ರತಿ ದಿನ 3 ಪ್ರದರ್ಶನ

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet Mysore

Edited Printed and Published by Dharmapracharanirata M Krishna Rao (Proprietor) at the Satyavadi Press Chamundipuram Mysore 4